ಮಾಡುವಲ್ಲಿಯೂ ತೊಡಗಿಸಿಕೊಳ್ಳುತ್ತಾನೆ. ತಮ್ಮ ಅಧ್ಯಯನಕ್ಕೆ ಒಪ್ಪಿದ ವ್ಯಕ್ತಿಗಳಿಗೆ ಹಣದ ಆಮಿಷವನ್ನೂ ಒಡ್ಡುತ್ತಾರೆ. ಇಂತಹ ಹಲವು ರೀತಿಯ ಸಹಾಯ ನೀಡಿ ಎಲ್ಲರ ವಿಶ್ವಾಸ ಗೆಲ್ಲುತ್ತಾರೆ. ಇದು ಅವರ ರಹಸ್ಯ ಯೋಜನೆಗೆ ಹೇಗೆ ಸಹಕಾರಿಯಾಯಿತು ಎಂದು ನಿನಗೇ ತಿಳಿಯುತ್ತದೆ.

★★★

ಸಿಕ್ಕಿಂನಿಂದ ಪ್ರಾರಂಭವಾದ ಅವರ ಅಧ್ಯಯನ ಟಿಬೆಟ್ ಹೊಕ್ಕು ಮುಂದುವರೆದು, ಅಲ್ಲಿನ ಗೋಲೊಕ್ ಎಂಬ ಜನಾಂಗದತ್ತಲೂ ಸಾಗುತ್ತದೆ. ಈ ಜನಾಂಗ ಹೊರಗಿನವರಿಗೆ ಅತ್ಯಂತ ಪ್ರತಿಕೂಲವಾಗಿದ್ದ, ಆಕ್ರಮಣಕಾರಿ ಅಲೆಮಾರಿ ಜನಾಂಗ. ಚೀನಾ ಮತ್ತು ಟಿಬೆಟಿನ ರಾಜರಿಗೂ ಇವರನ್ನು ಮಣಿಸಲು ಸಾಧ್ಯವಾಗಿರಲಿಲ್ಲ. ಹಾಗೆ ತಮ್ಮ ಸ್ವಂತಿಕೆಯನ್ನು ರಕ್ಷಿಸಿಕೊಳ್ಳುತ್ತಿದ್ದ ಕುಲ ಇದು. ಆರ್ಯರು ಸಹ ಹೀಗೆಯೆ ಅಲೆಮಾರಿಗಳಾಗಿ ಕುದುರೆ ಮತ್ತು ರಥಗಳಲ್ಲಿ ಬಂದು ಭಾರತದ ದೇಶೀಯರ ಮೇಲೆ ಆಕ್ರಮಣ ಮಾಡಿದವರೆಂದು ಆಗಿನ ಚರಿತ್ರಕಾರರು ಬಲವಾಗಿ ನಂಬಿದ್ದರಿಂದ ಈ ಗೋಲೊಕರನ್ನೂ ಬಹುಶಃ ಅಂತಹ ಆರ್ಯರಿರಬಹುದು ಎಂದು ಈ ಜರ್ಮನರು ಹೆಚ್ಚಿನ ಆಸಕ್ತಿ ತೋರಿರಲು ಸಾಧ್ಯ.

ಗೋಲೊಕರ ಪ್ರದೇಶಕ್ಕೆ ಹೊಗುವ ಮುನ್ನ, ಟಿಬೆಟ್ಟಿನಲ್ಲಿ ಅವರು ಅಳತೆಗೆ ಆರಿಸಿಕೊಂಡವರಲ್ಲಿ ನಾನೂ ಒಬ್ಬಳು! ನನ್ನನ್ನು ಆರಿಸಿಕೊಳ್ಳಲು ಏನು ಕಾರಣ ಎಂದು ತಿಳಿಯದಾದರೂ ಆಗ ನನಗೆ ಹಲವು ಉಡುಗೊರೆಗಳನ್ನು, ಹಣವನ್ನೂ ಕೊಟ್ಟರು. ನನಗೆ ಏನೇ ತೊಂದರೆಯಾದರೂ ಅದಕ್ಕೆ ಪರಿಹಾರ ಕೊಡುವುದಾಗಿ ಭಾಷೆಯಿತ್ತರು. ಹದಿನೆಂಟು ವರ್ಷದ ನನಗೆ ಆ ಆಮಿಷಗಳು ಅತ್ಯಂತ ಆಕರ್ಷಕವಾಗಿ ಕಂಡವು. ಸಂತೋಷದಿಂದಲೆ ಒಪ್ಪಿದೆ. ಅವರ ಬಿಡಾರಕ್ಕೆ ಕರೆದೊಯ್ದರು. ಒಂದು ಕುರ್ಚಿಯ ಮೇಲೆ ಕುಳ್ಳಿರಿಸಿದರು. ಮೊದ ಮೊದಲು ಮುಖದ ಅಳತೆ ಪ್ರಾರಂಭವಾಯಿತು. ನನ್ನ ಹಣೆ, ತಲೆಯ ಸುತ್ತ, ಹಲವು ಅಳತೆಗಳು, ನಂತರ ಕಿವಿ, ಮೂಗು, ಗಲ್ಲ, ಕೆನ್ನೆ, ತುಟಿಯ ಸುತ್ತ ಹಲವಾರು ರೀತಿಯ ಅಳತೆಗಳು. ಹೀಗೆ 30 ವರ್ಷದ ಸ್ಫುರದ್ರೂಪಿ ಗಂಡಸು ತನ್ನ ಮಾಪನದಿಂದ ಒಂದೊಂದಾಗಿ ಅಳೆಯುತ್ತಿದ್ದಂತೆ, ಅವನ ಕೈಗಳು ನನ್ನ ಮುಖದ ಸುತ್ತ, ತುಟಿಗಳ ಮೇಲೆ, ಕೆನ್ನೆಗಳನ್ನು ಸವರುತ್ತ, ಹತ್ತಾರು, ನೂರಾರು ಬಾರಿ ಮುಖದ ಮೇಲೆ ಓಡಾಡುವಾಗ, ಆತನ ಮೈ ನನ್ನ ಮೈಗೆ ಸತತವಾಗಿ, ಮೃದುವಾಗಿ ತಾಕುತ್ತಿರುವಾಗ, ಹದಿನೆಂಟು ವರ್ಷದ ಹೆಣ್ಣಿನ ದೇಹ ಹೇಗೆ ಸೋತಿರಬಹುದು ಎಂದು ಯೋಚಿಸು. ಮುಖದ ಅಳತೆ ಮುಗಿಯುವಷ್ಟರಲ್ಲಿಯೇ ನನ್ನನ್ನು ಒಂದು ರೀತಿಯ ಅಮಲು ಆವರಿಸಿತ್ತು. ಹಾಗೆ ಅಳೆಸಿಕೊಳ್ಳುವ ಕಾರ್ಯಕ್ಕೆ ನಾನಾಗಿ ಸೋತುಹೋಗಿದ್ದೆ. ಆನಂತರ ಅಳತೆಯ ಕೈಗಳು ಕತ್ತಿನತ್ತ, ಭುಜದತ್ತ, ಬೆನ್ನು ಮತ್ತು ಎದೆಯತ್ತ ಹರಿದಿದ್ದವು. ಅಷ್ಟರಲ್ಲಿ ಮೈಮೇಲೆ ಸರಿದಾಡುವ ಅಳತೆಯ ಕೈಗಳು ಹಾಗೆಯೇ ಹರಿದಾಡುತ್ತಿರಲಿ ಎಂಬ ಇಚ್ಛೆ ಆವರಿಸಿತ್ತು. ಅಳತೆ ಕೆಲಸ ಸೊಂಟದತ್ತ ಹರಿಯಿತು... ನನ್ನಲ್ಲಾಗುತ್ತಿದ್ದ ಬದಲಾವಣೆ ಆತನಿಗೂ ತಿಳಿದಿತ್ತು. ಹಾಗಾಗಿ ನನ್ನ ಸೋಲನ್ನು ಅರಿತನೋ ಅಥವಾ ಆತನ ಯೋಜನೆಗೆ ನಾನೇ ಸಹಕರಿಸಿದೆನೋ ತಿಳಿಯದು. ಒಟ್ಟಿನಲ್ಲಿ ಮೂಲ ಆರ್ಯರಿರಬಹುದೆಂದು ಅವರು ಭಾವಿಸಿದ್ದ ನನ್ನ ರಕ್ತಭೂಮಿಯಲ್ಲಿ ಜರ್ಮನಿಯ ವೀರ್ಯದ ಬಿತ್ತನೆ ನಡೆದುಹೋಗಿತ್ತು! ಅದಾದ ಕೆಲವು ದಿನಗಳವರೆಗೆ ಈ ವೀರ್ಯದಾನ ಹಲವು ಬಾರಿ ನಡೆಯುತ್ತಲೆ ಇತ್ತು. ವಯಸ್ಸಿಗೆ, ಸಂದರ್ಭಕ್ಕೆ ಸೋತ ನಾನೂ ಸಹ ಬಿತ್ತನೆಯನ್ನು ಮತ್ತೆ ಮತ್ತೆ ಬಯಸಿದ್ದೆ ಎಂಬುದನ್ನೂ ಒಪ್ಪುತ್ತೇನೆ.